# ಆರು ಶಿಷ್ಯಂದಿರು - ಆರು ಪ್ರಶ್ನೆಗಳು

## (ಪ್ರಶ್ನೋಪನಿಷತ್ತಿನ ಕಥೆ)

ಸ್ವಾಮಿ ವೀರೇಶಾನಂದ

ಪ್ರಶ್ನೋಪನಿಷತ್ತು ಅಥರ್ವವೇದದ ಒಂದು ಭಾಗ. ಈ ಉಪನಿಷತ್ತು ಆ ವೇದದ ಯಾವ ಬ್ರಾಹ್ಮಣ ಭಾಗದಲ್ಲಿ ಬರುವುದೆಂದು ನಮಗೆ ತಿಳಿದುಬಂದಿಲ್ಲ. ಈ ಉಪನಿಷತ್ತಿನ ಹೆಸರೇ ಹೇಳುವಂತೆ ಇದು ಪ್ರಶ್ನೋತ್ತರಗಳಿಂದ ಕೂಡಿದ ಉಪನಿಷತ್ತು.

ಕಥೆಯು ಆರಂಭವಾಗುವುದು ಹೀಗೆ: ಆರು ಜನ ಆಧ್ಯಾತ್ಮಿಕ ಸಾಧಕರಿದ್ದರು. ಮೊದಲನೆಯವನು ಸುಕೇಶ ಭಾರದ್ವಾಜ. ಅವನ ಹೆಸರು ಸುಕೇಶ. ಅವನು ಭರದ್ವಾಜನ ಮಗ. ಆದ್ದರಿಂದ ಅವನನ್ನು ಭಾರದ್ವಾಜ ಎಂದು ಕರೆಯಲಾಗಿದೆ. ಎರಡನೆಯವನು ಶೈಬ್ಯಸತ್ಯಕಾಮ. ಇವನ ಹೆಸರು ಸತ್ಯಕಾಮ. ಇವನು ಶಿಬಿಯ ಮಗ. ಮೂರನೆಯವನ ಹೆಸರು ಸೌರ್ಯಾಯಣಿ ಗಾರ್ಗ್ಯ. ಸೂರ್ಯನ ಮಗ ಸೌರ್ಯ. ಅವನ ಮಗ ಸೌರ್ಯಾಯಣಿ. ಇವನು ಗಾರ್ಗ್ಯ, ಗರ್ಗ ಗೋತ್ರದಲ್ಲಿ ಹುಟ್ಟಿದವನು. ಅಂದರೆ ಇವನು ಸೂರ್ಯನ ಮೊಮ್ಮಗ. ನಾಲ್ಕನೆಯವನು ಕೌಸಲ್ಯ ಆಶ್ವಲಾಯನ. ಇವನ ಹೆಸರು ಕೌಸಲ್ಯ. ಇವನು ಅಶ್ವಲನ ಮಗ. ಐದನೆಯವನು ಭಾರ್ಗವ ವೈದರ್ಭಿ. ಭಾರ್ಗವ ಎಂದು ಭೃಗುವಿನ ಗೋತ್ರದಲ್ಲಿ ಹುಟ್ಟಿದವನು. ವೈದರ್ಭಿ ಎಂದರೆ ವಿದರ್ಭ ದೇಶದಲ್ಲಿ ವಾಸವಾಗಿರುವವನು. ಆರನೆಯವನು ಕಬಂಧಿ ಕಾತ್ಯಾಯನ. ಕಬಂಧಿ ಎನ್ನುವುದು ಅವನ ಹೆಸರು. ಇವನು ಕಾತ್ಯನ ಮಗನಾದ್ದರಿಂದ ಕಾತ್ಯಾಯನ. ಇಲ್ಲಿ ಯುವ ಎಂಬ ಪ್ರತ್ಯಯವು ಬಂದಿದೆ. ಇವನ ಮುತ್ತಜ್ಜನು ಇನ್ನೂ ಬದುಕಿದ್ದಾನೆ ಎನ್ನುವುದನ್ನು ಇದು ತೋರಿಸುತ್ತದೆ.

ಈ ಆರು ಜನರೂ ಬ್ರಹ್ಮಪರರಾಗಿದ್ದರು. ಅಂದರೆ ಅಪರ ಬ್ರಹ್ಮವೇ ಹೆಚ್ಚಿನದು ಎಂಬ ನಂಬಿಕೆಯುಳ್ಳವರಾಗಿದ್ದರು. ಹಾಗೆಯೇ ಬ್ರಹ್ಮನಿಷ್ಠರೂ ಆಗಿದ್ದರು. ಅಂದರೆ ಅಪರಬ್ರಹ್ಮ ಅಥವಾ ಸಗುಣ ಬ್ರಹ್ಮದ ಉಪಾಸನೆಯೇ ಹೆಚ್ಚಿನದು ಎಂಬ ಭಾವನೆಯಿಂದ, ಅದರಲ್ಲಿಯೇ ನಿಷ್ಠರಾಗಿದ್ದರು. ಅದನ್ನೇ ಅನುಷ್ಠಾನ ಮಾಡಿಕೊಂಡಿದ್ದರು.

ಒಂದು ಕಾಲಘಟ್ಟದಲ್ಲಿ ಅವರಿಗೆ ಮನವರಿಕೆಯಾಯಿತು. ಈ ಅಪರಬ್ರಹ್ಮಕ್ಕೂ ಹೆಚ್ಚಿನ ಪರಬ್ರಹ್ಮವು ಇದೆ ಎಂದು ಗೊತ್ತಾಯಿತು. ಅದನ್ನು ತಿಳಿದುಕೊಳ್ಳುವುದಕ್ಕೆ ತಮ್ಮ ಕೈಲಾದಷ್ಟು ಪ್ರಯತ್ನವನ್ನು ಮಾಡೋಣ ಎಂದು ನಿರ್ಧರಿಸಿಕೊಂಡರು. ಪರಬ್ರಹ್ಮವನ್ನು ತಿಳಿಯುವುದಕ್ಕೋಸ್ಕರ ಪಿಪ್ಪಲಾದ ಎಂಬ ಆಚಾರ್ಯರನ್ನು ಆರಿಸಿಕೊಂಡರು. ಇವರೇ ಬ್ರಹ್ಮದ ಬಗ್ಗೆ ಎಲ್ಲವನ್ನೂ ಬೋಧಿಸುತ್ತಾರೆ ಎಂದು ತಮ್ಮಲ್ಲಿಯೇ ನಿಶ್ಚಯಮಾಡಿಕೊಂಡರು. ಒಬ್ಬೊಬ್ಬರೂ ಸಮಿತ್ತಿನ ಕಟ್ಟನ್ನು ಹಿಡಿದುಕೊಂಡು, ಭಗವಂತರಾದ ಅಂದರೆ ಗೌರವಕ್ಕೆ ಯೋಗ್ಯರಾದ ಪಿಪ್ಪಲಾದ ಆಚಾರ್ಯರ ಬಳಿಗೆ ಬಂದರು.

ಪಿಪ್ಪಲಾದ ಋಷಿಯು ಅವರನ್ನು ಕುರಿತು ಹೀಗೆ ಹೇಳಿದರು: ''ಇದುವರೆಗೆ ನಿಷ್ಠೆಯಿಂದ ಬ್ರಹ್ಮಚರ್ಯ ಪಾಲನೆಯನ್ನು ಮಾಡಿಕೊಂಡು ಬಂದಿದ್ದೀರಿ. ಸಗುಣ ಬ್ರಹ್ಮದ ಉಪಾಸನೆಯನ್ನೂ ಮಾಡುತ್ತಿದ್ದೀರಿ. ಆದರೆ ನಾನು ನಿಮಗೆ ಹೇಳುವುದೆಂದರೆ, ಇನ್ನೂ ಒಂದು ವರ್ಷ ಕಾಲ, ತಪಸ್ಸನ್ನು ಮಾಡಿಕೊಂಡು, ಬ್ರಹ್ಮಚರ್ಯೆಯಿಂದ, ಶ್ರದ್ಧೆಯಿಂದ ಕೂಡಿ, ಗುರುವಿನ ಸೇವೆಯನ್ನು ಮಾಡುತ್ತಿರಿ. ಒಂದು ವರ್ಷ ಕಳೆದ ಮೇಲೆ, ನಿಮ್ಮಲ್ಲಿ ಯಾರಿಗೆ ಯಾವ ವಿಷಯದಲ್ಲಿ ತಿಳಿದುಕೊಳ್ಳಬೇಕೆಂಬ ಆಸಕ್ತಿಯಿರುವುದೋ, ಆಯಾ ವಿಷಯಕ್ಕೆ ಸಂಬಂಧಪಟ್ಟ ಹಾಗೆ ನಿಮ್ಮಲ್ಲಿ ಪ್ರತಿಯೊಬ್ಬರೂ ಪ್ರಶ್ನೆಗಳನ್ನು ಕೇಳಬಹುದು. ನೀವು ಕೇಳಿದ ಪ್ರಶ್ನೆಗಳಿಗೆ ಉತ್ತರಗಳು ನಮಗೆ ಗೊತ್ತಿದ್ದರೆ, ನಮಗೆ ಗೊತ್ತಿರುವುದೆಲ್ಲವನ್ನೂ ಖಂಡಿತ ಹೇಳುತ್ತೇವೆ.''

ನೋಡಿ, ಆಚಾರ್ಯರ ನಿರಹಂಕಾರವನ್ನು! ನಮಗೆ ಗೊತ್ತಿದ್ದರೆ ಎಂದು ಹೇಳುತ್ತಾರೆ. ಈ ವಿನಯವು ಮಹಾತ್ಮರ ಒಂದು ಲಕ್ಷಣ. ಅವರು ತಮ್ಮ ಶಿಷ್ಯರ ಎಲ್ಲ ಪ್ರಶ್ನೆಗಳಿಗೂ ಸರಿಯಾದ ಉತ್ತರವನ್ನು ನೀಡಿರುವುದನ್ನು ಮುಂದೆ ನಾವು ನೋಡುತ್ತೇವೆ. ಹೀಗಾಗಿ ನಮಗೆ ಗೊತ್ತಿದ್ದರೆ ಎನ್ನುವುದು ಅವರ ವಿನಯವನ್ನು ತೋರಿಸುತ್ತದೆ. ಗುರುಗಳು ಹೇಳಿದಂತೆ, ಶಿಷ್ಯರೆಲ್ಲರೂ ನಡೆದುಕೊಂಡರು. ಒಂದು ವರ್ಷ ಕಾಲ ಬ್ರಹ್ಮಚರ್ಯವನ್ನು ಅಭ್ಯಾಸ ಮಾಡಿದರು. ತಪಸ್ಸನ್ನು ಆಚರಿಸಿದರು. ತಮ್ಮ ಗುರುವಿನ ಬಳಿಗೆ ಮತ್ತೆ ತಿರುಗಿಬಂದರು. ಗುರು ಪಿಪ್ಪಲಾದರಿಗೆ ಪ್ರಶ್ನೆಗಳನ್ನು ಕೇಳಲು ಆರಂಭಿಸಿದರು. ಗುರುವು ಇವುಗಳಿಗೆ ಉತ್ತರವನ್ನು ನೀಡಲು ಆರಂಭಿಸಿದರು.

### ಕಬಂಧಿಯ ಪ್ರಶ್ನೆ

ಮೊದಲು ಕಬಂಧಿಯು ಪ್ರಶ್ನೆಯನ್ನು ಕೇಳಿದನು: ''ಭಗವಾನ್, ಬ್ರಾಹ್ಮಣರೇ ಮುಂತಾದ ಜನರು ಹುಟ್ಟುವುದು ಎಲ್ಲಿಂದ? ಅವರ ಸೃಷ್ಟಿಯು ಉಂಟಾಗುವುದು ಎಲ್ಲಿಂದ?'' ಇದಕ್ಕೆ ಆಚಾರ್ಯರು ಹೀಗೆ ಉತ್ತರಿಸುತ್ತಾರೆ: ''ಪ್ರಜಾಪತಿ ಅಥವಾ ಸರ್ವಾತ್ಮನಾದ ಭಗವಂತನಿಂದಲೇ ಈ ಜಗತ್ತಿನ ಸೃಷ್ಟಿಯು ಉಂಟಾಯಿತು. ಅವನಿಗೆ ಪ್ರಜೆಗಳನ್ನು ಸೃಷ್ಟಿಮಾಡಬೇಕು ಎನ್ನುವ ಇಚ್ಛೆಯುಂಟಾಯಿತು. ಇದಕ್ಕಾಗಿ ಸೃಷ್ಟಿಸಂಕಲ್ಪ ಎಂಬ ತಪಸ್ಸನ್ನು

ಮಾಡಿದನು. ತಪಸ್ಸು ಅಂದರೆ ಜ್ಞಾನ, ಆಲೋಚನೆ. ತಪಸ್ಸು ಮಾಡಿದ ನಂತರ, ಮೊದಲಿಗೆ, ಸೃಷ್ಟಿಗೆ ಕಾರಣವಾಗುವ ಮಿಥುನ ವನ್ನು ಅಂದರೆ ಜೋಡಿಯನ್ನು ಸೃಷ್ಟಿಸಿದನು. ಇವು ಬಹುವಾಗಿ ಪ್ರಜೆಗಳನ್ನು ಉಂಟುಮಾಡುತ್ತವೆ ಎಂದು ಯೋಚಿಸಿದನು.''

ಮಿಥುನವನ್ನು ವಿವರವಾಗಿ ಗುರುವು ಉಪದೇಶಿಸುತ್ತಾನೆ. ಮಿಥುನ ಅಥವಾ ಜೋಡಿಯೆಂದರೆ ಅನ್ನ ಮತ್ತು ಅನ್ನಾದಗಳ ಜೋಡಿ. ಅನ್ನ ಎಂದರೆ ಆಹಾರ. ಅನ್ನಾದ ಎಂದರೆ ಆಹಾರವನ್ನು ತಿನ್ನುವವನು. ಇಡೀ ಜಗತ್ತು ಇವುಗಳ ಒಕ್ಕೂಟವೇ ಆಗಿದೆ. ಅಂದರೆ ಜಗತ್ತಿನಲ್ಲಿ ಇರುವುದು ಎರಡೇ : ಭೋಗ್ಯವಸ್ತುಗಳು ಮತ್ತು ಅವುಗಳನ್ನು ಭೋಗಿಸುವ ಭೋಕ್ತೃ. ಈ ಪ್ರಪಂಚದಲ್ಲಿ ಇವುಗಳಿಗಿಂದ ಬೇರೆ ಏನೂ ಇಲ್ಲ. ಭೋಗವಸ್ತುಗಳಲ್ಲಿ ಎರಡು ವಿಧ. ಒಂದು ಮೂರ್ತ, ಸ್ಥೂಲಪದಾರ್ಥ; ಮತ್ತು ಅಮೂರ್ತ, ಸೂಕ್ಷ್ಮಪದಾರ್ಥ. ಅನ್ನ ಅಥವಾ ಅನ್ನಾದ ಎರಡೂ ಸೇರಿರುವ ಒಟ್ಟು ಸಮಷ್ಟಿತತ್ತ್ವವೇ ಭಗವತ್ ತತ್ತ್ವ. ಇದನ್ನೇ ಪ್ರಜಾಪತಿ ಎನ್ನುತ್ತಾರೆ. ಈ ತತ್ತ್ವವನ್ನೇ ಉಪಾಸನೆಗಾಗಿ, ಹಲವು ವಿಧಗಳಲ್ಲಿ ಗುರುವು ಉಪದೇಶಿಸುತ್ತಾನೆ.

### ಭಾರ್ಗವ ವೈದರ್ಭಿಯ ಪ್ರಶ್ನೆ

ತದನಂತರ ಭಾರ್ಗವ ವೈದರ್ಭಿಯು ಪ್ರಶ್ನಿಸಿದನು: ''ಈ ಮಾನವ ದೇಹವನ್ನು ಧರಿಸುವುದಕ್ಕೆ ಬೇಕಾದ ಪರಿಕರಗಳು ಯಾವುವು? ಅವುಗಳಲ್ಲಿ ಹೆಚ್ಚಿನದು, ಶ್ರೇಷ್ಠವಾದುದು ಯಾವುದು?'' ಇದಕ್ಕೆ ಪಿಪ್ಪಲಾದರು ಉತ್ತರಿಸಿದರು: ''ಆಕಾಶ ಮುಂತಾದ ಪಂಚಭೂತಗಳೇ ಶರೀರದ ರೂಪವನ್ನು ತಾಳುತ್ತವೆ. ಈ ಪಂಚ ಭೂತಗಳೇ ಪಂಚಜ್ಞಾನೇಂದ್ರಿಯಗಳು ಮತ್ತು ಪಂಚಕರ್ಮೇಂ ದ್ರಿಯಗಳಾಗಿ ರೂಪುಗೊಂಡಿವೆ. ಒಮ್ಮೆ ಇವೆಲ್ಲ ತಾವೇ ದೇಹ ವನ್ನು ಹಿಡಿದಿಟ್ಟುಕೊಂಡಿದ್ದೇವೆ ಎಂದು ಅಹಂಕಾರಪಡುತ್ತಿದ್ದವು. ಆಗ ಮುಖ್ಯಪ್ರಾಣನು, 'ನಾನೇ ಶರೀರದ ಎಲ್ಲ ಚಟುವಟಿಕೆ ಗಳನ್ನೂ ನಡೆಸುತ್ತಿದ್ದೇನೆ. ಆದ್ದರಿಂದ ಭ್ರಮೆಗೆ ಒಳಗಾಗದಿರಿ' ಎಂದು ಎಚ್ಚರಿಸಿದನು. ಆದರೆ ಇಂದ್ರಿಯಗಳು ಅವನ ಮಾತನ್ನು ಕೇಳಲಿಲ್ಲ. ಇದನ್ನು ನೋಡಿ, ಪ್ರಾಣನು ಕೋಪಗೊಂಡು ಶರೀರ ವನ್ನು ಬಿಟ್ಟು ಎದ್ದುಹೋಗುವವನಂತೆ ನಟಿಸಿದನು. ರಾಣಿಜೇನು ಗೂಡಿನಿಂದ ಹೊರಟಕೂಡಲೇ, ಉಳಿದ ಜೇನುಗಳೆಲ್ಲವೂ ಹೊರ ಡಲು ತಯಾರಾಗುತ್ತವೆ. ಅದರಂತೆ, ಇಂದ್ರಿಯಗಳೆಲ್ಲವೂ ಪ್ರಾಣ ನ ಜೊತೆಗೆ ಬಲಾತ್ಕಾರವಾಗಿ ಹೊರಡಲು ತಯಾರಾದವು. ಆಗ ತಿಳಿಯಿತು ಇಂದ್ರಿಯಗಳಿಗೆ, ಪ್ರಾಣನ ಶ್ರೇಷ್ಠತೆ ಎಷ್ಟು ಎಂದು.

''ಈ ಪ್ರಾಣನೇ ಸಮಷ್ಟಿಯ ನೆಲೆಯಲ್ಲಿ ಅಗ್ನಿ, ಸೂರ್ಯ, ಮೋಡ, ವಾಯು, ಭೂಮಿ, ಚಂದ್ರ ಇವೆಲ್ಲವೂ ಆಗಿದ್ದಾನೆ. ಮೂರ್ತ, ಅಮೂರ್ತಸ್ವರೂಪವೆಲ್ಲವೂ ಪ್ರಾಣವೇ. ಅವನೇ ದೇವತೆಗಳ ಅಮೃತ. ವೇದಗಳು, ಬ್ರಾಹ್ಮಣಕ್ಷತ್ರಿಯರ ಬಲವೂ ಅವನೇ. ಅವನೇ ಇಂದ್ರಿಯಗಳ ರೂಪದಲ್ಲಿ ಇರುವವನು. ಇವನೇ ಯಜ್ಞದ ಅಗ್ನಿಯು. ದೇಹದಲ್ಲಿ ಸಮಸ್ತ ವ್ಯಾಪಾರ ಗಳನ್ನು ನಡೆಸುತ್ತಿರುವವನೂ ಅವನೇ. ಅವನೇ ಮೋಡವಾಗಿ ಮಳೆಯನ್ನು ಸುರಿಸುತ್ತಿರುವವನು. ಇವನು ದೇಹೇಂದ್ರಿಯ ಗಳು, ಆಕಾಶಾದಿ ಪಂಚಭೂತಗಳು, ಜ್ಞಾನೇಂದ್ರಿಯಗಳು, ಮನಸ್ಸು ಇವೆಲ್ಲವನ್ನೂ ವ್ಯಾಪಿಸಿಕೊಂಡಿದ್ದಾನೆ. ಇವನೇ ಎಲ್ಲ ಭೋಗಗಳನ್ನೂ ಭೋಗಿಸುತ್ತಿರುವ ಭೋಕ್ತೃ.''

### ಕೌಸಲ್ಯ ಆಶ್ವಲಾಯನನ ಪ್ರಶ್ನೆ

ಮುಂದಿನ ಪ್ರಶ್ನೆಯನ್ನು ಕೌಸಲ್ಯ ಆಶ್ವಲಾಯನನು ಕೇಳಿ ದನು: ''ತಾವು ಪ್ರಾಣನ ಮಹತ್ವದ ಬಗ್ಗೆ ಹೇಳಿದಿರಿ. ಆದರೆ ಪ್ರಾಣನು ಹುಟ್ಟುವುದು ಯಾವುದರಿಂದ? ಶರೀರದಲ್ಲಿ ಅವನು ಪ್ರವೇಶಿಸುವುದು ಹೇಗೆ? ಇಲ್ಲಿ ಅವನು ಬೇರೆಬೇರೆಯಾಗಿ ಹೇಗೆ ವಿಂಗಡಿಸಿಕೊಂಡಿದ್ದಾನೆ? ಅವನು ದೇಹವನ್ನು ಬಿಟ್ಟುಹೋಗು ವುದು ಹೇಗೆ? ಇವನು ದೇಹದ ಒಳಗೂ, ಹೊರಗೂ ಇರುವುದು ಹೇಗೆ?'' ಗುರು ಪಿಪ್ಪಲಾದರು ಇದಕ್ಕೆ ಉತ್ತರಿಸಿದರು.

''ಪ್ರಾಣ ಅಥವಾ ಇಡೀ ಜಗತ್ತಿನ ಜೀವದಾಯಕ ತತ್ತ್ವವು ಹುಟ್ಟುವುದು ಆತ್ಮ ಅಥವಾ ಬ್ರಹ್ಮನಿಂದಲೇ. ಮನುಷ್ಯನಿಂದ ನೆರಳು ಹುಟ್ಟುವಂತೆ ಅವನು ಹುಟ್ಟುತ್ತಾನೆ. ಅಂದರೆ ನೆರಳು ಮನುಷ್ಯನೇ ಆಗಿರುವಂತೆ ಪ್ರಾಣವು ಆತ್ಮನೇ ಆಗಿದ್ದಾನೆ. ಜೀವಿ ಗಳ ಕರ್ಮದ ದೆಸೆಯಿಂದ ಅವನು ಈ ಶರೀರವನ್ನು ಪ್ರವೇ ಶಿಸುತ್ತಾನೆ. ಇವನು ಶರೀರದಲ್ಲಿ ಐದು ವಿಧವಾಗಿ ಹಂಚಿಕೊಂಡು ಕೆಲಸ ಮಾಡುತ್ತಾನೆ. ಇಂದ್ರಿಯಗಳನ್ನು ಇಂತಿಂಥ ಕೆಲಸ ಮಾಡ ಬೇಕೆಂದು ನಿರ್ಬಂಧಿಸುವವನು ಕೂಡ ಪ್ರಾಣನೇ. ಇವನೇ ಶರೀರದ ಹೊರಗೆ ಸೂರ್ಯ ಮುಂತಾದ ರೂಪಗಳಲ್ಲಿ ಕಾಣಿಸಿ ಕೊಳ್ಳುತ್ತಾನೆ. ಹೀಗೆ ಪ್ರಾಣನು ಒಳಗೂ ಹೊರಗೂ ವ್ಯಾಪಿಸಿ ಕೊಂಡಿರುತ್ತಾನೆ.

''ಮೇಲೆ ಹೇಳಿದಂತೆ ಪ್ರಾಣನ ಉತ್ಪತ್ತಿ, ಶರೀರದ ಪ್ರವೇಶ, ಹೊರ-ಒಳಗಿನ ವ್ಯಾಪ್ತಿ ಇವುಗಳನ್ನು ಅರಿತುಕೊಂಡು ಉಪಾಸನೆ ಮಾಡಬೇಕು.''

### ಸೌರ್ಯಾಯಣಿ ಗಾರ್ಗ್ಯನ ಪ್ರಶ್ನೆ

ಇನ್ನು ಸೌರ್ಯಾಯಣಿ ಗಾರ್ಗ್ಯನು ಪ್ರಶ್ನೆ ಮಾಡುತ್ತಾನೆ. ''ಭಗವಾನ್, ಒಬ್ಬ ಮನುಷ್ಯನು ನಿದ್ರೆ ಮಾಡುವಾಗ, ನಿದ್ರಿಸು ತ್ತಿರುವ ಅಂಗಗಳು ಯಾವುವು? ಎಚ್ಚರವಾಗಿರುವ ಅಂಗಗಳು ಯಾವುವು? ಕನಸುಗಳನ್ನು ನೋಡುವ ಜ್ಯೋತಿರೂಪದ ದೇವತೆ ಅದಾವುದು? ನಿದ್ರೆಯ ಸುಖವು ಉಂಟಾಗುವುದು ಯಾರಿಗೆ? ನಿದ್ರೆಯ ಸಮಯದಲ್ಲಿ ಎಚ್ಚರ ಕನಸುಗಳ ಕೆಲಸಗಳನ್ನೆಲ್ಲ ಬಿಟ್ಟು ಎಲ್ಲಿ ಜನರು ಚೆನ್ನಾಗಿ ಒಂದಾಗಿಬಿಡುತ್ತಾರೆ?''

ಇದಕ್ಕೆ ಗುರುಗಳಾದ ಪಿಪ್ಪಲಾದರು ಉತ್ತರ ಕೊಡುತ್ತಾರೆ: ''ಎಲೈ ಗಾರ್ಗ್ಯನೇ, ಸೂರ್ಯ ಮುಳುಗುತ್ತಿರುವಾಗ, ಕಿರಣ ಗಳೆಲ್ಲವೂ ತೇಜೋಮಯವಾದ ಸೂರ್ಯಮಂಡಲದಲ್ಲಿ ಒಂದಾಗಿ

ಬಿಡುತ್ತವೆ. ಹಾಗೆಯೇ ಸೂರ್ಯನು ಉದಯಿಸುವಾಗ, ಮತ್ತೆ ಅವೆಲ್ಲವೂ ಅವನಿಂದ ಹೊರಬರುತ್ತವೆ. ಅದೇ ರೀತಿಯಲ್ಲಿ ನಿದ್ರೆಯ ಸಮಯದಲ್ಲಿ ಎಲ್ಲ ಅಂಗಗಳೂ ಅವುಗಳಿಗೆಲ್ಲ ದೇವತೆಯಂತೆ ಇರುವ ಮನಸ್ಸಿನಲ್ಲಿ ಒಂದಾಗಿಬಿಡುತ್ತವೆ. ಆದ್ದರಿಂದಲೇ ಆ ಸಮಯದಲ್ಲಿ ಒಬ್ಬ ಮನುಷ್ಯನು ಕೇಳುವುದಿಲ್ಲ , ಮೂಸಿ ನೋಡುವುದಿಲ್ಲ, ರುಚಿನೋಡುವುದಿಲ್ಲ, ಸ್ಪರ್ಶ ಮಾಡುವುದಿಲ್ಲ, ಮಾತನಾಡುವುದಿಲ್ಲ , ಕರ್ಮೇಂದ್ರಿಯಗಳ ಯಾವ ಕಾರ್ಯವನ್ನೂ ಮಾಡುವುದಿಲ್ಲ. ಆಗ ಇತರರು 'ಇವನು ನಿದ್ರಿಸುತ್ತಿದ್ದಾನೆ' ಎಂದು ಹೇಳುತ್ತಾರೆ.

''ಈ ಸಮಯದಲ್ಲಿ ದೇಹದಲ್ಲಿ ಪ್ರಾಣಗಳು ಮಾತ್ರವೇ ಎಚ್ಚರ ವಾಗಿರುತ್ತವೆ. ಇದರ ಮೇಲೆ ಉಪಾಸನೆ ಅಥವಾ ಧ್ಯಾನವನ್ನು ಮಾಡಬೇಕು. ಹೇಗೆ ಗೊತ್ತೆ? ಅಪಾನ ವಾಯುವು ಗಾರ್ಹಪತ್ಯ ಅಗ್ನಿಯೆಂದು ಉಪಾಸನೆ ಮಾಡಬೇಕು; ಪ್ರಾಣವು ಆಹವನೀಯ ಅಗ್ನಿಯೆಂದು ಧ್ಯಾನಮಾಡಬೇಕು. ಉಚ್ಛ್ವಾಸ ನಿಶ್ವಾಸಗಳನ್ನು ಆಹುತಿಗಳೆಂದು ಧ್ಯಾನ ಮಾಡಬೇಕು. ಈ ಯಜ್ಞದ ಯಜಮಾನನು ಮನಸ್ಸೆಂದು ಧ್ಯಾನ ಮಾಡಬೇಕು. ಇದು ಯಜಮಾನನನ್ನು ಬ್ರಹ್ಮದ ಕಡೆಗೆ ಕರೆದುಕೊಂಡುಹೋಗುತ್ತದೆ.

''ಇನ್ನು ಕನಸನ್ನು ಕಾಣುವ ದೇವನು ಯಾರು ಎಂದು ಪ್ರಶ್ನೆಯನ್ನು ಕೇಳಿದೆಯಲ್ಲವೇ? ಸ್ವಪ್ನದಲ್ಲಿ ಈ ದೇವನು ತನ್ನದೇ ಆದ ಅರಿವು, ಜ್ಞಾನ, ಅಥವಾ ಚೈತನ್ಯವನ್ನೇ ಅನುಭವಿಸುತ್ತಾನೆ. ಅಂದರೆ ಇಲ್ಲಿ ಸ್ವಯಂಜ್ಯೋತಿಯಾಗಿರುತ್ತಾನೆ. ಇದೇ ಅವನ ಮಹಿಮೆ. ಜಾಗ್ರದವಸ್ಥೆಯಲ್ಲಿ ಏನನ್ನು ನೋಡಿದ್ದನೋ, ಅದನ್ನು ಸ್ವಪ್ನದಲ್ಲಿ ಮತ್ತೆ ನೋಡುತ್ತಾನೆ. ಜಾಗ್ರದವಸ್ಥೆಯಲ್ಲಿ ಏನನ್ನು ಕೇಳಿದ್ದನೋ, ಅದನ್ನು ಮತ್ತೆ ಸ್ವಪ್ನದಲ್ಲಿಯೂ ಕೇಳುತ್ತಾನೆ. ಜಾಗ್ರದವಸ್ಥೆಯಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ, ದಿಕ್ಕುಗಳಲ್ಲಿ ಅನುಭವಿಸಿದ್ದನ್ನೇ ಮತ್ತೆ ಅನುಭವಿಸುತ್ತಾನೆ. ಇದಲ್ಲದೆ, ಈ ಜನ್ಮದಲ್ಲಿ ಕಂಡದ್ದನ್ನೂ, ಹಿಂದಿನ ಜನ್ಮದಲ್ಲಿ ಕಂಡದ್ದನ್ನೂ ನೋಡುತ್ತಾನೆ. ಹೊರಗೆ ಅನುಭವಿಸಿದ್ದನ್ನೂ, ಮನಸ್ಸಿನಲ್ಲಿ ಅನುಭವಿಸಿದ್ದನ್ನೂ ಮತ್ತೆ ಸ್ವಪ್ನದಲ್ಲಿ ಅನುಭವಿಸುತ್ತಾನೆ. ಇರುವುದನ್ನು, ಇಲ್ಲದೇ ಇರುವುದನ್ನು (ಭ್ರಮೆ) ಹೇಗೆ ಜಾಗ್ರದವಸ್ಥೆಯಲ್ಲಿ ಅನುಭವಿಸಿದ್ದನೋ, ಅದನ್ನೇ ಮತ್ತೆ ಸ್ವಪ್ನದಲ್ಲಿಯೂ ಅನುಭವಿಸುತ್ತಾನೆ. ಇವೆಲ್ಲವೂ ಮನಸ್ಸಿನ ವಾಸನೆಗಳು ಮಾತ್ರ. ಅವೇ ವಿವಿಧ ರೂಪಗಳಾಗಿ ಮನುಷ್ಯನಿಗೆ ಕಾಣಿಸಿಕೊಳ್ಳುತ್ತವೆ.

''ಯಾವಾಗ ಮನಸ್ಸು ಅಡಗಿಹೋಗುವುದೋ, ಆಗ ಒಬ್ಬನು ಸ್ವಪ್ನಗಳನ್ನು ಕಾಣುವುದಿಲ್ಲ. ಕೇವಲ ಅರಿವು ಅಥವಾ ಚೈತನ್ಯದ ಅನುಭವ ಉಂಟಾಗುತ್ತದೆ. ಅಲ್ಲಿ ಅಪಾರ ಸುಖದ ಅನುಭವ ಆಗುತ್ತದೆ. ಇದನ್ನೇ ಸುಷುಪ್ತಿ ಎನ್ನುವುದು. ಇದಕ್ಕೆ ಒಂದು ಉದಾಹರಣೆಯನ್ನು ನೀಡಬಹುದು: ಪಕ್ಷಿಗಳು ಬೆಳಗ್ಗೆ ಆಹಾರವನ್ನು ಹುಡುಕಿಕೊಂಡು ಅಲೆಯುತ್ತವೆ. ಸಾಯಂಕಾಲ ತಮ್ಮ ಗೂಡನ್ನು ಸೇರುತ್ತವೆ. ಇದೂ ಹಾಗೆಯೇ. ಎಲ್ಲವೂ ಪರಮಾತ್ಮನನ್ನು ಹೋಗಿ ಸೇರುತ್ತದೆ. ಎಲ್ಲವೂ ಎಂದರೆ ಯಾವುವು ಎಂದು ಕೇಳುತ್ತೀಯೇನು? ಸ್ಥೂಲ ಪೃಥ್ವಿ ಮತ್ತು ಅದಕ್ಕೆ ಕಾರಣವಾದ ಗಂಧತನ್ಮಾತ್ರೆ; ನೀರು ಮತ್ತು ಅದಕ್ಕೆ ಕಾರಣವಾದ ಆಪೋಮಾತ್ರೆ; ತೇಜಸ್ಸು ಮತ್ತು ಅದಕ್ಕೆ ಕಾರಣವಾದ ತೇಜೋಮಾತ್ರೆ; ವಾಯು ಮತ್ತು ಅದಕ್ಕೆ ಕಾರಣವಾದ ವಾಯುಮಾತ್ರೆ; ಆಕಾಶ ಮತ್ತು ಆಕಾಶಮಾತ್ರೆ. ಒಟ್ಟಾರೆ ಸ್ಥೂಲ ಮತ್ತು ಸೂಕ್ಷ್ಮ ಭೂತಗಳೆಲ್ಲವೂ ಸುಷುಪ್ತಿಯ ಕಾಲದಲ್ಲಿ ಪರಮಾತ್ಮನನ್ನೇ ಹೋಗಿ ಸೇರುತ್ತವೆ. ಹಾಗೆಯೇ ಇಂದ್ರಿಯಗಳು ಮತ್ತು ಇಂದ್ರಿಯಗಳ ವಿಷಯಗಳು ಕೂಡ. ಪ್ರಾಣಗಳೂ ಕೂಡ. ಹಾಗೆಯೇ ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ, ತೇಜಸ್ಸು ಮತ್ತು ಅವುಗಳ ವಿಷಯಗಳು ಇವೆಲ್ಲವೂ ಆತ್ಮನಲ್ಲಿ ಅಡಗಿಹೋಗುತ್ತವೆ.

''ಈ ಸುಷುಪ್ತಿಯಲ್ಲಿ ಎಲ್ಲ ಇಂದ್ರಿಯಗಳು, ಪ್ರಾಣಗಳು ಅಡಗಿಹೋಗುತ್ತವೆ. ಅವುಗಳ ಅಭಿಮಾನಿಯಾದ ವಿಜ್ಞಾನಾತ್ಮನು (ಇಂದ್ರಿಯ ಮತ್ತು ಮನಸ್ಸುಗಳ ಉಪಾಧಿಗಳೊಂದಿಗೆ ಇರುವ ಆತ್ಮ) ಅಕ್ಷರ ಎಂಬ ಪರಮಾತ್ಮನಲ್ಲಿ ಸೇರಿಕೊಳ್ಳುತ್ತಾನೆ. ನೀರಿನಲ್ಲಿ ಸೂರ್ಯನ ಪ್ರತಿಬಿಂಬವು ಹೇಗೆ ಪ್ರವೇಶಮಾಡುತ್ತದೆಯೋ, ಹಾಗೆಯೇ ವಿಜ್ಞಾನಾತ್ಮವು ಅಕ್ಷರದಲ್ಲಿ ಲೀನವಾಗುತ್ತದೆ. ಅಕ್ಷರವೆಂದರೆ ನಿರುಪಾಧಿಕವಾದ, ನಿರ್ಗುಣವಾದ ಆತ್ಮ ಅಥವಾ ಬ್ರಹ್ಮ.''

ಗುರುಗಳಾದ ಪಿಪ್ಪಲಾದರು ಈ ಐಕ್ಯತೆಯ ಜ್ಞಾನದ ಫಲವನ್ನು ತಿಳಿಸಿಹೇಳುತ್ತಾರೆ: ''ಎಲೈ ಸೋಮ್ಯನೇ, ಅಜ್ಞಾನದ ತಮಸ್ಸಿನ ಲೇಶವೂ ಇಲ್ಲದ, ಗುಣಾತೀತವಾದ, ಯಾವ ವಿಶೇಷಣವೂ ಇಲ್ಲದ, ಶುದ್ಧಸ್ವರೂಪವುಳ್ಳ, ಅಕ್ಷರವೆಂಬ ಪರಮಾರ್ಥ ತತ್ತ್ವವನ್ನು ಯಾರು ತಿಳಿದುಕೊಳ್ಳುತ್ತಾರೋ, ಅಂಥವನು ಸರ್ವಜ್ಞನಾಗುತ್ತಾನೆ; ಸರ್ವವೂ ಆಗುತ್ತಾನೆ.''

### ಶೈಬ್ಯ ಸತ್ಯಕಾಮನ ಪ್ರಶ್ನೆ

ಈಗ ಶೈಬ್ಯ ಸತ್ಯಕಾಮನು ಗುರುಗಳಾದ ಪಿಪ್ಪಲಾದರಿಗೆ ಪ್ರಶ್ನಿಸಿದನು. ''ಭಗವಂತನೇ, ಯಾವನು ಸಾಯುವವರೆಗೂ ಓಂಕಾರವನ್ನು ಧ್ಯಾನಮಾಡುತ್ತ ಇರುತ್ತಾನೆಯೋ, ಅವನು ಯಾವ ಲೋಕವನ್ನು ಪಡೆದುಕೊಳ್ಳುತ್ತಾನೆ?''

ಈ ಪ್ರಶ್ನೆಗೆ ಗುರುಗಳು ಉತ್ತರವನ್ನು ಹೇಳಿದರು: ''ಪರಬ್ರಹ್ಮವೂ ಓಂಕಾರವೇ. ಅಪರಬ್ರಹ್ಮವೂ ಓಂಕಾರವೇ. ಇದನ್ನು ತಿಳಿದವನು ಆ ಆಲಂಬನದ ಮೂಲಕವಾಗಿಯೇ (ಅಪರ ಬ್ರಹ್ಮದ ಮೂಲಕವಾಗಿಯೇ) ಸಿದ್ಧಿಯನ್ನು ಪಡೆದುಕೊಳ್ಳುತ್ತಾನೆ. ಪರಬ್ರಹ್ಮವೆಂದರೆ ಸತ್ಯವಾದ ಅಕ್ಷರಬ್ರಹ್ಮ. ಅಪರಬ್ರಹ್ಮವೆಂದರೆ ಉಪಾಧಿಸಹಿತವಾದ ಬ್ರಹ್ಮ. ಇವೆರಡೂ ಮೂಲಭೂತವಾಗಿ ಒಂದೇ ತತ್ತ್ವ. ಹೀಗಾಗಿ ಎರಡನ್ನೂ ಓಂಕಾರವೇ ಸಂಕೇತಿಸುತ್ತದೆ.

''ಓಂಕಾರದಲ್ಲಿ ಮೂರು ಮಾತ್ರೆಗಳು: ಅ, ಉ ಮತ್ತು ಮ. ಇಲ್ಲಿ ಮೊದಲನೆಯ ಮಾತ್ರೆಯನ್ನು ಧ್ಯಾನಮಾಡಿದವನು ಮನುಷ್ಯಲೋಕದಲ್ಲಿಯೇ ಒಳ್ಳೆಯ ಗತಿಯನ್ನು ಪಡೆದುಕೊಳ್ಳು

ತ್ತಾನೆ. ಅಲ್ಲಿ ತಾನು ತಪಸ್ಸಿನಿಂದ, ಬ್ರಹ್ಮಚರ್ಯ ಮತ್ತು ಶ್ರದ್ಧೆಯಿಂದ ಕೂಡಿದವನಾಗಿ ಮಹಿಮಾನ್ವಿತನಾಗುತ್ತಾನೆ. ಎರಡು ಮಾತ್ರೆಗಳನ್ನು ಧ್ಯಾನಮಾಡಿದವನು ಅಂತರಿಕ್ಷದಲ್ಲಿರುವ ಸೋಮ ಲೋಕಕ್ಕೆ ಹೋಗುತ್ತಾನೆ. ಅಲ್ಲಿ ವಿಭೂತಿಯೆಂಬ ಒಳ್ಳೆಯ ಗತಿಯನ್ನು ಪಡೆದುಕೊಂಡು, ಅಲ್ಲಿ ವಿವಿಧ ಭೋಗಗಳನ್ನು ಅನುಭವಿಸಿ, ಮನುಷ್ಯಲೋಕಕ್ಕೆ ಹಿಂತಿರುಗಿಬರುತ್ತಾನೆ. ಇನ್ನು ಮೂರೂ ಮಾತ್ರೆಗಳ ಧ್ಯಾನ ಅಂದರೆ, ಓಂಕಾರದ ಪೂರ್ಣೋಪಾಸನೆಯನ್ನು ಮಾಡಿದವನು ತೇಜೋರೂಪವಾದ ಸೂರ್ಯದೇವನಲ್ಲಿಯೇ ಹೋಗಿ ಸೇರಿಕೊಳ್ಳುತ್ತಾನೆ. ಹೇಗೆ ಹಾವು ತನ್ನ ಹಳೆಯ ಪೊರೆಯನ್ನು ಬಿಟ್ಟು, ಹೊಸ ಪೊರೆಯನ್ನು ಪಡೆದುಕೊಳ್ಳುತ್ತಾನೆಯೋ, ಅದೇ ರೀತಿ, ಇವನು ಪಾಪದಿಂದ ಬಿಡುಗಡೆ ಪಡೆಯುತ್ತಾನೆ. ಬ್ರಹ್ಮಲೋಕ ಅಂದರೆ ಹಿರಣ್ಯಗರ್ಭನೆಂಬ ಬ್ರಹ್ಮದ ಸತ್ಯವೆಂಬ ಹೆಸರಿನ ಲೋಕ. ಮೂರು ಮಾತ್ರೆಗಳನ್ನೂ ಒಟ್ಟಾರೆ ಧ್ಯಾನ ಮಾಡಿದಂಥವನು ಹಿರಣ್ಯಗರ್ಭನಿಗಿಂತಲೂ ಹೆಚ್ಚಿನ ಪರಮಾತ್ಮನನ್ನೇ ಧ್ಯಾನಮಾಡುತ್ತಾನೆ. ಆ ಪರಮಾತ್ಮನು ಎಲ್ಲ ಶರೀರಗಳನ್ನು ಚೈತನ್ಯರೂಪದಲ್ಲಿ ಪ್ರವೇಶ ಮಾಡಿರುತ್ತಾನೆ.

ವೇದಗಳು ಅಪರಬ್ರಹ್ಮರೂಪಗಳು. ಇದಕ್ಕೆ ಬದಲಾಗಿ ಓಂಕಾರವು ಪುರುಷ ಎಂಬ ಹೆಸರಿನ ಅಕ್ಷರ ಅಥವಾ ಪರಮಾತ್ಮನನ್ನೇ ಸೂಚಿಸುತ್ತದೆ. ಹೀಗಾಗಿ ಓಂಕಾರವನ್ನು ಧ್ಯಾನಿಸುವವನು ಅಂಥ ಸತ್ಯತತ್ತ್ವದ ಜೊತೆಗೆ ಅವಿನಾಭಾವವನ್ನು ಹೊಂದುತ್ತಾನೆ.

### ಸುಕೇಶ ಭಾರದ್ವಾಜನ ಪ್ರಶ್ನೆ

ಸುಷುಪ್ತಿಕಾಲದಲ್ಲಿ ಜಗತ್ತೆಲ್ಲವೂ ಚೈತನ್ಯಾತ್ಮದ ಜೊತೆಗೆ ಸೇರಿಹೋಗಿ, ಅಕ್ಷರದಲ್ಲಿ ಸೇರಿಹೋಗುತ್ತದೆ ಎಂದು ಹಿಂದಿನ ಪ್ರಶ್ನೆಯಲ್ಲಿ ಹೇಳಿದೆ. ಇನ್ನು ಮುಂದೆ ಸುಕೇಶ ಭಾರದ್ವಾಜ ಎನ್ನುವವನು ಆರನೆಯ ಪ್ರಶ್ನೆಯನ್ನು ಕೇಳುತ್ತಾನೆ. ಈ ಪ್ರಶ್ನೆಗೆ ಕಾರಣವಾದ ತನ್ನ ಒಂದು ಅನುಭವವನ್ನು ಹೇಳುತ್ತಾನೆ. ''ಭಗವಾನ್ ಕೌಸಲ್ಯ ಹಿರಣ್ಯನಾಭವೆನ್ನುವವನು ರಾಜಪುತ್ರನು. ಅವನು ನನ್ನ ಬಳಿಗೆ ಬಂದನು. ಒಂದು ಪ್ರಶ್ನೆಯನ್ನು ಮಾಡಿದನು: ಭಾರದ್ವಾಜನೇ, ನೀನು ಷೋಡಶ ಕಲೆಗಳ ಪುರುಷನನ್ನು ಬಲ್ಲೆಯಾ? ಎಂದು ಕೇಳಿದನು. ಅದಕ್ಕೆ ನಾನು, ನನಗೆ ಈ ಪುರುಷನು ತಿಳಿದಿಲ್ಲ ಎಂದು ಹೇಳಿದೆನು. ನಾನು ತಿಳಿದಿದ್ದರೆ, ಹೇಳದೆ ಇರುತ್ತಿದ್ದೆನೆ? ಯಾರು ಸುಳ್ಳು ಹೇಳುತ್ತಾರೆಯೋ, ಅವನು ಗಿಡಗಳು ಬೇರು ಸಹಿತ ಒಣಗಿಹೋಗುವಂತೆ, ನಾಶವಾಗುತ್ತಾನೆ. ಆದ್ದರಿಂದ ನಾನು ಸುಳ್ಳು ಹೇಳಲಾರೆನು. ಆಗ ಆ ರಾಜಪುತ್ರನು ಮಾತನಾಡದೆ ರಥವೇರಿ ಹೊರಟುಹೋದನು. ಇವನು ಕೇಳಿದ ವಿಷಯವನ್ನೇ ನಾನು ನಿಮಗೆ ಕೇಳುತ್ತಿದ್ದೇನೆ. ಈ ಷೋಡಶ ಕಲೆಗಳ ಪುರುಷನು ಎಲ್ಲಿದ್ದಾನೆ?''

ಇದಕ್ಕೆ ಗುರುಗಳಾದ ಪಿಪ್ಪಲಾದರು ಉತ್ತರವನ್ನು ಹೇಳಿದರು: ''ಎಲೈ ಸೋಮ್ಯ, ಯಾರಿಗೆ ಹದಿನಾರು ಕಲೆಗಳು ಉಂಟಾಗುತ್ತವೆಯೋ, ಅಂಥ ಪುರುಷನು ಈ ಶರೀರದಲ್ಲಿಯೇ ಇರುತ್ತಾನೆ. ಈ ಪುರುಷನು ಹೀಗೆ ಆಲೋಚನೆ ಮಾಡಿದನು: 'ಯಾವನು ದೇಹವನ್ನು ಬಿಟ್ಟುಹೋದರೆ, ನಾನು ಕೂಡ ಬಿಟ್ಟು ಹೋಗಬೇಕಾಗುತ್ತದೆ? ಯಾವನು ಈ ಶರೀರದಲ್ಲಿ ನಿಂತಿದ್ದರೆ ನಾನು ಕೂಡ ಅಲ್ಲಿ ಇರುವುದಕ್ಕೆ ಸಾಧ್ಯವಾಗುತ್ತದೆ?' ಅಂದರೆ ತಾನು ಮುಂದೆ ಮಾಡಬೇಕಾದ ಸೃಷ್ಟಿಯ ಬಗ್ಗೆ ಚಿಂತಿಸಿದನು. ಅವನು ಮೊದಲು ಪ್ರಾಣವನ್ನು ಸೃಷ್ಟಿಸಿದನು. ಪ್ರಾಣನಿಂದ ಶ್ರದ್ಧೆ, ಆಕಾಶ, ವಾಯು, ಜ್ಯೋತಿ, ನೀರು, ಪೃಥಿವಿ, ಇಂದ್ರಿಯಗಳು, ಮನಸ್ಸು, ಅನ್ನ ಇವುಗಳನ್ನು ಸೃಷ್ಟಿಸಿದನು. ಹಾಗೆಯೆ ವೀರ್ಯ, ತಪಸ್ಸು, ಮಂತ್ರಗಳು, ಕರ್ಮ, ಲೋಕಗಳು ಇವೆಲ್ಲವನ್ನೂ ಸೃಷ್ಟಿಸಿದನು. ಹಾಗೆಯೇ ದೇವದತ್ತ, ಯಜ್ಞದತ್ತ ಮುಂತಾದ ಹೆಸರುಗಳನ್ನು ಕೂಡ ಸೃಷ್ಟಿಸಿದನು. ಇವನ್ನೇ ಹದಿನಾರು ಕಲೆಗಳು ಎನ್ನುವುದು. ಇವೆಲ್ಲವೂ ಅವಿದ್ಯೆಯಿಂದ ಕಾಣಿಸಿಕೊಂಡವು. ಯಾವಾಗ ಆತ್ಮವಿದ್ಯೆಯು ಉಗಮವಾವುದೋ, ಆಗ ಈ ಹದಿನಾರು ಕಲೆಗಳ ವಿಂಗಡಣೆಯೆಲ್ಲವೂ ಕೊನೆಗೊಳ್ಳುತ್ತದೆ. ಮತ್ತೆ ಎಲ್ಲವೂ ಪುರುಷನಲ್ಲಿಯೇ ಲಯವಾಗುತ್ತವೆ.

''ಹೀಗೆ ಎಲ್ಲವೂ ಲಯವಾಗುವುದು ಹೇಗೆ ಎನ್ನುವುದಕ್ಕೆ ಒಂದು ದೃಷ್ಟಾಂತವನ್ನು ಹೇಳಬಹುದು. ನದಿಗಳೆಲ್ಲವೂ ಸಮುದ್ರವನ್ನು ಸೇರುವಂಥವೇ. ಆ ದಿಕ್ಕಿನಲ್ಲಿಯೇ ಎಲ್ಲ ನದಿಗಳೂ ಹರಿಯುತ್ತವೆ. ಹರಿದು ಸಮುದ್ರವನ್ನು ಸೇರಿದ ಮೇಲೆ, ಅವುಗಳ ಅಸ್ತಿತ್ವವೆಲ್ಲವೂ ನಾಶವಾಗುತ್ತವೆ. ಅದೇ ರೀತಿ ಹದಿನಾರು ಕಲೆಗಳೆಲ್ಲವೂ ತಮ್ಮ ನಾಮರೂಪಗಳೆಲ್ಲವನ್ನೂ ತ್ಯಜಿಸಿ ಪುರುಷನಲ್ಲಿಯೇ ಐಕ್ಯವಾಗುತ್ತದೆ. ಅವುಗಳ ಅಸ್ತಿತ್ವವೆಲ್ಲ ಪುರುಷನಲ್ಲಿ ಲೀನವಾಗುತ್ತದೆ. ಅವುಗಳೆಲ್ಲವೂ ಪುರುಷ ಎಂಬ ಹೆಸರನ್ನೇ ಪಡೆಯುತ್ತವೆ. ಈ ಪುರುಷನು ಅಕಲನಾಗುತ್ತಾನೆ (ಕಲೆಗಳಿಲ್ಲದವನಾಗುತ್ತಾನೆ), ಅಮೃತನಾಗುತ್ತಾನೆ.

''ಒಂದು ಬಂಡಿಯ ಚಕ್ರದಲ್ಲಿರುವ ನಾಭಿಯಲ್ಲಿಯೇ ಎಲ್ಲ ಹಾರೆಗೋಲುಗಳು ಕೂಡ ಬಂದುಸೇರುತ್ತವೆ. ಅದೇ ರೀತಿ, ಹದಿನಾರು ಕಲೆಗಳೆಲ್ಲದ್ದಕ್ಕೂ ಪುರುಷನೇ ಆಧಾರಸ್ತಂಭವಾಗಿದ್ದಾನೆ. ಅವನನ್ನು ಅರಿತುಕೊಂಡರೆ, ಮೃತ್ಯುವು ಒಬ್ಬನನ್ನು ದುಃಖಕ್ಕೆ ಈಡುಮಾಡುವುದಿಲ್ಲ.''

### ಉಪಸಂಹಾರ

ಆರು ಜನ ಶಿಷ್ಯರಿಗೂ ಉಪದೇಶಮಾಡಿ ಗುರುಗಳಾದ ಪಿಪ್ಪಲಾದರು ತಮ್ಮ ಶಿಷ್ಯರಿಗೆ ಹೀಗೆ ಹೇಳುತ್ತಾರೆ: ''ತಿಳಿಯಬೇಕಾದ ಪರಬ್ರಹ್ಮವು ಇಷ್ಟೇ. ಇದಕ್ಕಿಂತ ಹೆಚ್ಚಿನದು ಯಾವುದೂ ಇಲ್ಲ.'' ಆ ಶಿಷ್ಯರೆಲ್ಲರೂ ತಮ್ಮ ಗುರುಗಳನ್ನು ಪುಷ್ಪಾಂಜಲಿಯ ಮೂಲಕ ಆರಾಧಿಸುತ್ತಾರೆ. ''ನೀವೇ ನಮ್ಮ ತಂದೆ. ನೀವೇ ನಮ್ಮನ್ನು ಅವಿದ್ಯೆಯ ಆಚೆಯ ದಡವನ್ನು ಸೇರಿಸಿದ್ದೀರಿ. ನಿಮಗೆ ನಮಸ್ಕಾರ. ಪರಮಋಷಿಗಳಿಗೆ ನಮಸ್ಕಾರ! ಪರಮಋಷಿಗಳಿಗೆ ನಮಸ್ಕಾರ!'' ಎಂದು ಕೃತಾರ್ಥಭಾವದಿಂದ ಗುರುಗಳನ್ನು ಮತ್ತು ಗುರುಪರಂಪರೆಯನ್ನು ಕೊಂಡಾಡುತ್ತಾರೆ.